ಕೂಡ ಬರೆದು ತಿಳಿಸಿದ್ದಾರೆ. ಈಗಲಾದರೂ ಇದನ್ನು ಗಮನಿಸಿ ಅವರಿಗೆ ಸರಿಯಾದ ರೀತಿಯಲ್ಲಿ ಮಾನ್ಯತೆ ಕೊಡುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಷಯವನ್ನು ತಜ್ಞರು ಪರಿಶೀಲಿಸಿದ್ದಾರೆ. ಆಜೋಮ್ಯಾಟಿಕ್ ಫ್ಲಡ್ ಗೇಟುಗಳಿಂದ ದೊಡ್ಡ ಜಲಾಶಯಗಳಲ್ಲಿ ಅನಾಹುತವಾಗುವ ಸಂಭವವಿಲ್ಲ ಇದರಿಂದ ಬಹಳ ಕಷ್ಟವಾಗುತ್ತದೆ, ಅಲ್ಪ ಸ್ವಲ್ಪ ಕೆಟ್ಟುಕಡಿವೆಯಾದರೆ ತೊಂದರೆಯಾಗಬಹುದು, ಆದ ದರಿಂದ ಅದನ್ನು ಅಳವಡಿಸುವುದಕ್ಕಾಗುವುದಿಲ್ಲ ಎಂದು ತಜ್ಞರು ತಮ್ಮ ನ್ಪಷ್ಟವಾದ ಅಭಿಪ್ರಾಯವನ್ನು ತಿಳಿಸಿದ್ದಾರೆ.

AUDITING OF ACCOUNTS IN GROUP PANCHAYATS OF MAGADI TALUK

16. SRI BETTASWAMY GOWDA (Kudur).—
Will the Minister for Community Development and Social Welfare be pleased to state :—

(*a*) the number of group panchayats in Magadi Taluk where annual auditing of accounts has been conducted regularly and the number of group panchayats where funds have been misappropriated ;

(*b* the names of the group panchayats where funds have been misappropriated ;

c the action taken by the Government in this behalf?

SRI M. MALLIKARJUNASWAMY – (Minister for Community Development and Social Welfare).

(*a*) Annual auditing of occounts in repect of– 5 Panchayat's for the year 1967-68, 8 Panchayats for the year 1968-69, 30 Panchayats for the year 969 70, 8 Panchayats for the year 1970-71 and 17 Panchayats for the year 1971-1972 have been conducted.

Funds have been misappropriated in four Village Panchayats

(*b*) 1 Marur Panchayat

2. Hulikal Panchayat

3. Narasandra Panchayat

4. Chikkamudigere Panchayat

(c) The case being disposed of in the Court of the Assistant Commissioner, Ramanagar, the misappropriated funds are being recovered from the concerned.

ಶ್ರೀ ಬೆಟ್ಟಸ್ವಾಮಿಗೌಡ: ವಿಳಂಬವಾಗಿ ಆಡಿಟ್ ಆಗುವುದಕ್ಕೆ ಕಾರಣವೇನು?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ: ಸಿಬ್ಬಂದಿಯಿಲ್ಲದಿದ್ದುದೇ ಕಾರಣ.

ಶ್ರೀ ಬೆಟ್ಟಸ್ವಾಮಿಗೌಡ: ಉತ್ತರದಲ್ಲಿ ನಮೂದಿಸಿರುವುದಲ್ಲದೆ ಇನ್ನು ಕೆಲವು ಪಂಚಾಯಿತಿಗಳಲ್ಲಿ ದುರುಪಯೋಗವಾಗಿದೆ, ರಾಜ್ಯದ ಕೆಲವು ಮುಖಂಡರು ಅದರ ಆಡಿಟ್ ಆಗುವುದನ್ನು ತಡೆ ಹಿಡಿದಿದ್ದಾರೆ ಎಂಬುದು ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ: ಅದು ಸರಿಯಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ: ಪಂಚಾಯಿತಿ ಹಣ ದುರುಪಯೋಗವಾದಾಗ ಅದನ್ನು ಇಷ್ಟು ಕಾಲದೊಳಗೆ ವಸೂಲುಮಾಡಬೇಕೆಂದು ಕಾಲ ನಿಗದಿಮಾಡಿದ್ದೀರಾ ಅಥವಾ ಕೊಟ್ಟಾಗ ತೆಗೆದುಕೊಳ್ಳುವ ಪದ್ಧತಿ ಮುಂದುವರಿಸುತ್ತಿದ್ದೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ: ಚಿಕ್ಕಮುದಿಗೆರೆ ಪಂಚಾಯಿತಿಯಲ್ಲಿ 790 ರೂಪಾಯಿ ದುರುಪಯೋಗವಾಗಿದೆ, ಸಾಗೆಯೇ ಇತರ ಮೂರು ಪಂಚಾಯಿತಿಗಳಲ್ಲಿ ಸಹ ದುರುಪಯೋಗ ನಡೆದಿದೆ. ಈ ಸಂಬಂಧದಲ್ಲಿ ಅಸಿಸ್ಟೆಂಟ್ ಕಮಿಷನರ್ ಮುಂದೆ ಕೇಸು ಇದೆ.

ಶ್ರೀ ಎಚ್. ಎಸ್. ಸಿದ್ದಪ್ಪ: ದುರುಪಯೋಗವಾದ ಹಣ ಬರಮಾಡಿಕೊಳ್ಳಲು ಕಾಲ ನಿಗದಿ ಮಾಡಿದೆಯೇ ಅಥವಾ 5ಪೈಸೆ, 10ಪೈಸೆ ಕೊಟ್ಟಾಗ ತೆಗೆದು ಕೊಳ್ಳುವಿರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ: ಕೊಟ್ಟಾಗ ತೆಗೆದುಕೊಳ್ಳುವುದಿಲ್ಲ. ಕಾಲ ನಿಗದಿ ಮಾಡಿಲ್ಲ ಕೆಲವು ಸಂದರ್ಭಗಳಲ್ಲಿ ಫೋರ್ಸ್ ಸಿಗುವುದಿಲ್ಲ. ಹೀಗೆ ಅನೇಕ ಕಾರಣಗಳಿಂದ ನಿಧಾನವಾಗುವುದು,

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ : 4 ಪಂಚಾಯಿತಿಗಳಲ್ಲೆಷ್ಟು ಹಣ ದುರುಪಯೋಗವಾಗಿದೆ? ದುರುಪಯೋಗ ಯಾವರೀತಿ ಮಾಡಿದ್ದಾರೆ? ಕೇಸನ್ನು ಈ ಸಂಬಂಧವಾಗಿ ಯಾವಾಗ ರಾಮನಗರದ ಅಸಿಸ್ಟೆಂಟ್ ಕಮಿಷನರ್ ಕೋರ್ಟಿನಲ್ಲಿ ಹಾಕಲಾಯ್ತು? ಅದು ಇತ್ಯರ್ಥವಾಗಿದೆಯೇ? ಆಗಿಲ್ಲದಿದ್ದರೆ ಇನ್ನೂ ಎಷ್ಟು ಕಾಲ ಬೇಕು? ದುರುಪಯೋಗವಾಗಿರುವ ಹಣವನ್ನು ವಸೂಲು ಮಾಡುವುದೊಂದೇ ಇರುವ ಕ್ರಮವೋ ಅಥವಾ ಬೇರೆ ಇದಕ್ಕೆ ಶಿಕ್ಷೆ ಏನಾದರೂ ಇದೆಯೋ?

ಅಧ್ಯಕ್ಷರು : ಅನೇಕ ಪ್ರಶ್ನೆಗಳನ್ನು ಕೇಳಿರುವುದರಿಂದ ಒಂದಕ್ಕೆ ಉತ್ತರ ಕೊಟ್ಟರೆ ಸಾಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ: ಒಂದು ಪಂಚಾಯಿತಿಯಲ್ಲಿ 790 ರೂಪಾಯಿ, ಇನ್ನೊಂದರಲ್ಲಿ 2472 ರೂಪಾಯಿ ದುರುಪಯೋಗವಾಗಿದೆ. ಕೆಲವು ಭಾಗ ವಸೂಲಾಗಿದೆ.

ಶ್ರೀ ಬೆಟ್ಟಸ್ವಾಮಿಗೌಡ: ಮೂಗಡಿ ತಾಲ್ಲೂಕು ಚಿಕ್ಕಕಳ್ಳಿ ಗ್ರೂಪ್ ಪಂಚಾಯಿತಿಯಲ್ಲಿ ದುರುಪಯೋಗವಾಗಿದೆ. ಅಲ್ಲಿ ಆಡಿಟ್ ಮಾಡಿಸಲು ಕ್ರಮ ತೆಗೆದು ಕೊಳ್ಳುವಿರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ: ಅದು ಗೊತ್ತಾಗಿಲ್ಲ. ಮೂನ್ಯ ಸದಸ್ಯರು ಈಗ ಹೇಳಿದ್ದಾರೆ. ಅದನ್ನು ನೋಡಿಸುತ್ತೇನೆ.

Questions for Answers on the day (but not taken up)

COMMON OFFICE FOR T. D. B. AND C. D. B. IN A TALUK

11. SRI B. SUBBAYYA SHETTY (Surathkal).—

Will the Minister for Community Development and Social Welfare be pleased to state:—

(*a*) whether there is any proposal before Government to have a common office for both the Taluk Development Board and for the Community Development Block in a Taluk;